**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಅಫಜಲಪೂರ.**

**ಸಿಸಿ ನಂ.01/2020**

**ಫಿರ್ಯಾದಿಃ** ರಾಜಶೇಖರ @ ರಾಜಕುಮಾರ ತಂದೆ ಬಸಲಿಂಗಪ್ಪ
ಪಾಸೋಡಿ, 43 ವರ್ಷ, ಉಃ ಒಕ್ಕಲುತನ,
ವಾಸಃ ಮತೋಳಿ ಗ್ರಾಮ, ತಾಃ ಅಫಜಲಪೂರ,
ಜಿಃ ಕಲಬುರಗಿ.

**-ಃಃ ವಿರುದ್ದ ಃಃ-**

**ಆರೋಪಿ/ತರುಃ** ಬಾವೂರಾಯ ಪೂಜಾರಿ ತಂದೆ ಮಲ್ಲಪ್ಪ,
36 ವರ್ಷ, ಉಃ ಒಕ್ಕಲುತನ,
ವಾಸಃ ಸೋನಕನಹಳ್ಳಿ ಗ್ರಾಮ, ತಾಃ ಇಂಡಿ,
ಜಿಃ ವಿಜಯಪೂರ.

**ಆಪಾದನೆ**

ಫಿರ್ಯಾದಿದಾರನು ನಿಮ್ಮ ಮೇಲೆ ಹೇಳುವ ಆಪಾದನೆ ಏನೆಂದರೆ, ಫಿರ್ಯಾದಿದಾರ ಮತ್ತು ಆರೋಪಿತನಾದ ನೀವು ಸ್ನೇಹಿತರಾಗಿದ್ದು, ನೀವು ಕಬ್ಬು ಬೆಳೆ ಕಡಿಯುವ ಕಾರ್ಮಿಕ ಗುತ್ತಿಗೆ ಕೆಲಸ ಮಾಡುತ್ತಿದ್ದು, ನಿಮಗೆ ರೂ.3,65,000-00 ಹಣದ ಅವಶ್ಯಕತೆ ಇತ್ತು. ನೀವು ಪಿರ್ಯಾದುದಾರನಿಂದ ಈಗ್ಗೆ 2019 ರಂದು ನಗದು ರೂಪದಲ್ಲಿ ಕೈಗಡ ಸಾಲ ಅಂತಾ ರೂ.3,65,000/-(ಮೂರು ಲಕ್ಷ ಆರವತ್ತೈದು ಸಾವಿರ ರೂಪಾಯಿ) ಹಣ ಕೇಳಿ ಪಡೆದುಕೊಂಡಿರುತ್ತೀರಿ ಮತ್ತು ಸದರಿ ಸಾಲದ ಹಣವನ್ನು 6 ತಿಂಗಳ ಒಳಗೆ ಹಿಂದಿರುಗಿಸಿರುವುದಾಗಿ ವಾಗ್ದನ ಮಾಡಿರುತ್ತೀರಿ ಅದರಂತೆ ಫಿರ್ಯಾದಿದಾರನು 6 ತಿಂಗಳ ಅವಧಿ ಮುಗಿದ ನಂತರ ಕೇಳಿದಾಗ, ಸದರಿ ಆರೋಪಿತನಾದ ನೀವು ದಿನಾಂಕಃ 13.06.2019 ರಂದು ನಮೂದಿಸಿದ ವಿಜಯಪೂರ ಜಿಲ್ಲೆಯ ಹೊರ್ತಿ ಶಾಖೆಯ ಸಿಂಡಿಕೇಟ್ ಬ್ಯಾಂಕಿಗೆ ಸಂಬಂಧಿಸಿದ ಚೆಕ್ ನಂ.208733 ರ ರೂ.1,20,000/-, ಚೆಕ್ ನಂ.208745 ರ ರೂ.95,000/- ಮತ್ತು

ಚೆಕ್ ನಂ.208737 ರ ರೂ.1,50,000/- ರೂಪಾಯಿಗಳ ಚೆಕ್ಕಗಳ ಒಟ್ಟು ರೂ.3,65,000/- ರೂಪಾಯಿ ಹಣವನ್ನು ಚೆಕ್ಕಗಳ ಮೂಖಾಂತರ ದಿನಾಂಕಃ13.06.2019 ರಂದು ಫಿರ್ಯಾದಿದಾರನಿಗೆ ಸದರಿ ಹಣ ಮರುಪಾವತಿಗಾಗಿ ಕೊಟ್ಟಿದ್ದು, ಸದರಿ ಚೆಕನ್ನು ದಿನಾಂಕಃ 20.06.2019 ರಂದು ಕೆನರಾ ಬ್ಯಾಂಕ್ ಅಫಜಲಪೂರ ಶಾಖೆಯಲ್ಲಿ ನಗದೀಕರಣಕ್ಕಾಗಿ ಹಾಕಿದ್ದು, ಸದರಿ ಚೆಕ್ ನಗದೀಕರಣವಾಗದೇ ನಿನ್ನ ಖಾತೆಯಲ್ಲಿ **"ಸಾಕಷ್ಟು ಹಣವಿಲ್ಲ"** ಎಂದು ವಾಪಸ್ ಬಂದಿದ್ದು ಈ ಸಂಬಂಧವಾಗಿ ನಿಮ್ಮ ಖಾತೆಯಿರುವ ಸದರಿ ಬ್ಯಾಂಕ್ನವರು ದಿನಾಂಕಃ20.06.2019 ರಂದು ಒಂದು ಹಿಂಬರಹವನ್ನು ಕೊಟ್ಟಿದ್ದು ನಂತರ ಪಿರ್ಯಾದುದಾರರು ನಿನಗೆ ಕಾನೂನು ಪ್ರಕಾರ ದಿನಾಂಕಃ 02.07.2019 ರಂದು ಒಂದು ನೋಟೀಸನ್ನು ಕಳುಹಿಸಿದ್ದು, ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ ಎಂದು ಗೊತ್ತಿದ್ದೂ ಕೂಡ ಪಿರ್ಯಾದಿಗೆ ಮೋಸ ಮಾಡುವ ದುರುದ್ದೇಶದಿಂದ, ಅಂತಹ ಚೆಕ್‌ಗಳನ್ನು ನೀಡಿರುತ್ತೀರಿ ಮತ್ತು ಈ ಕಾರಣದಿಂದ, ನೀವು ನೆಗೋಷಿಬಲ್ ಇನ್ಸ್ಟ್ರುಮೆಂಟ್ ಕಾಯ್ದೆ ಕಲಂ.138 ರ ಅಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿರುತ್ತೀರಿ ಎಂದು ಆಪಾದಿಸಲಾಗಿದೆ.

**ಃ ಆಪಾದನೆ ಃ**

ಪ್ರಃ-1 ನಿಮಗೆ ಮೇಲಿನ ಆಪಾದನೆಯ ಎಲ್ಲಾ ಸಾರಾಂಶ ತಿಳಿಯಿತೆ?

ಉಃ

ಪ್ರಃ-2 ಮೇಲಿನ ಪಾದನೆಯನ್ನು ಒಪ್ಪುವಿರಾ? ಪ್ರತಿರಕ್ಷೆ ಇದೆಯಾ? ನಿಮ್ಮ

ಉಃ

(ಮೇಲಿನ ಆಪಾದನೆಯನ್ನು ಅರೋಪಿಗೆ ತೆರೆದ ನ್ಯಾಯಾಲಯದಲ್ಲಿ ಕನ್ನಡದಲ್ಲಿ ಓದಿ ಹೇಳಿ, ನಂತರ ಅವರು ನೀಡಿದ ಉತ್ತರವನ್ನು ತೆರೆದ ನ್ಯಾಯಾಲಯದಲ್ಲಿ ಬರೆದು ಕೊಳ್ಳಲಾಯಿತು)

ದಿನಾಂಕಃ02.03.2026

**(ಶ್ರೀ ಅನೀಲ ಅಮಾತೆ )**
**ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ.ದಂ.**
**ಅಫಜಲಪೂರ.**